ವಾರದ ಪತ್ರ

## ಪಾತ್ರಗಳ ಆಯ್ಕೆ ಅಸಮರ್ಪಕ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಶನಿ ಧಾರಾವಾಹಿ ಪೌರಾಣಿಕ ಕತೆಯನ್ನು ಹೊಂದಿದ್ದು ನೋಡಲು ಆಸಕ್ತಿಯನ್ನು ಹುಟ್ಟಿಸುತ್ತಿದೆ. ಆದರೆ ಅದರಲ್ಲಿನ ಪಾತ್ರಗಳ ಆಯ್ಕೆ ಮಾತ್ರ ಸಮರ್ಪಕವಾಗಿಲ್ಲ. ಕತೆಯ ಮುಖ್ಯ ಪಾತ್ರವಾದ ಶನಿಯ ಮುಖದ ಮೇಲೆ ನೋಡುಗರಿಗೆ ಹೆದರಿಕೆ ಹುಟ್ಟಿಸುವಂತಹ ಆ ಭೀಕರ ಕಳೆಯೇ ಇಲ್ಲ. ಸೂರ್ಯದೇವನನ್ನು ದುಡುಕಿನ ಸ್ವಭಾವದ, ಪೂರ್ವಾಪರಗಳನ್ನು ಯೋಚಿಸದೆ ನಿರ್ಣಯ ಕೈಗೊಳ್ಳುವ ವ್ಯಕ್ತಿಯಂತೆ ಚಿತ್ರಿಸಲಾಗಿದೆ. ಪಾತ್ರಕ್ಕೆ ತಕ್ಕಂತೆ ಮೈಕಟ್ಟು ಚೆನ್ನಾಗಿದೆ. ಆದರೆ ಮುಖದ ಮೇಲೆ ಸೂರ್ಯನಿಗಿರಬೇಕಾದ ತೇಜಸ್ಸು ಇಲ್ಲ. ಸೂರ್ಯನ ಸಂಭಾಷಣೆ ಹೇಳುವ ರೀತಿ ಸರಿಯಾಗಿಲ್ಲ.

ತ್ರಿಮೂರ್ತಿಗಳ ಪಾತ್ರವನ್ನು ಕಂಡರೆ ನಗೆ ಬರುತ್ತದೆ. ಅವರಿಗೆ ಮಾಡಿರುವ ಮೇಕಪ್ ಎಷ್ಟೊಂದು ಕಳಪೆಯಾಗಿದೆಯೆಂದರೆ ಅವರು ಹೊಟ್ಟೆಪಾಡಿಗಾಗಿ ಬಣ್ಣ ಹಚ್ಚಿಕೊಂಡು ಬರುವ ಬಹುರೂಪಿಗಳಂತೆ ಕಾಣುತ್ತಾರೆ. ಶುಕ್ರಾಚಾರ್ಯರ ವೇಷ– ಭೂಷಣ ಒಬ್ಬ ಮಾಂತ್ರಿಕನಂತೆ ಇದ್ದರೆ ಉಳಿದ ರಾಕ್ಷಸರ ವೇಷ ಭೂಷಣಗಳು ಹಾರರ್ ಸಿನಿಮಾದಲ್ಲಿರುವ ದೆವ್ವಗಳಂತೆ ಇವೆ. ಬೃಹಸ್ಪತಿಯ ಪಾತ್ರ ತೀರಾ ಬಾಲಿಶವಾಗಿದೆ. ಆತ ದೇವಕುಲಕ್ಕೆ ಗುರುವಾದರೂ ಇಂದ್ರನ ಕಿಂಕರನಂತೆ ವರ್ತಿಸುತ್ತಾನೆ. ನಾರದ ಪಾತ್ರಧಾರಿಯ ಮುಖ ಹೆಣ್ಣಿನ ಮುಖದಂತೆ ಇದೆ. ನಾರದನ ಮುಖದ ಮೇಲೆ ಇರಬೇಕಾದ ಕುಹಕದ ಭಾವ ಈ ನಾರದನ ಮುಖದ ಮೇಲೆ ಕಂಡುಬರುವುದೇ ಇಲ್ಲ. ರಾಕ್ಷಸರ ಸೇನಾಪತಿ ಸದಾ ತಲೆಯನ್ನು ಏಕೆ ಅಲ್ಲಾಡಿಸುತ್ತಿರುತ್ತಾನೋ ತಿಳಿಯದು.

—ಮುರಲೀಧರ ಕುಲಕರ್ಣಿ, ಬೀದರ್

## ಏಪ್ರಿಲ್ ಒಳಗೆ ಮುಗಿಸಿ!

ದೇವರೇ ದಯವಿಟ್ಟು ಕೃಪೆಮಾಡು. ‘ನಾಗಿಣಿ’ ಧಾರಾವಾಹಿಯಲ್ಲಿ ನಾಗಮಣಿ ಹಾಗೂ ‘ಮಹಾದೇವಿ’ ಧಾರಾವಾಹಿಯಲ್ಲಿ ‘ಶ್ರೀಚಕ್ರ’ ಸಿಗಬೇಕು. ‘ಪುಟ್ಟಗೌರಿ ಮದುವೆ’ ಧಾರಾವಾಹಿಯ ಪುಟ್ಟಗೌರಿ ನಿಧನ ಹೊಂದಬೇಕು. ‘ಅಗ್ನಿ ಸಾಕ್ಷಿ’ಯಲ್ಲಿ ರಾಧಿಕಾ ಸಿಗಬೇಕು. ‘ಅಮೃತ ವರ್ಷಿಣಿ’ಯಲ್ಲಿ ವಿಕ್ಕಿ ಹಾಗೂ ವಿಜಯರಲ್ಲಿ ನಿಜವಾದ ವಿಜಯ ಯಾರು ಎಂದು ಗೊತ್ತಾಗಬೇಕು. ದಯವಿಟ್ಟು ಏಪ್ರಿಲ್ 5ರೊಳಗೆ ನೀವು ಇವುಗಳನ್ನು ನೆರವೇರಿಸಬೇಕು. ಕಾರಣ ಐಪಿಎಲ್ ಪಂದ್ಯಾವಳಿ ಶುರು ಆಗುತ್ತದೆ. ನಂತರವಾದರೂ ನನ್ನ ಕೈಗೆ ರಿಮೋಟ್ ಸಿಗಬಹುದು.

—ಮುಕುಂದ ಹೆರಕಲ್ಲ, ಕಲಬುರ್ಗಿ

## ಯುವಕರಿಗೆ ಉತ್ತಮ ಸಂದೇಶ

21–1–2018ರಂದು ಚಂದನ ವಾಹಿನಿಯಲ್ಲಿ 12.30–1.00 ರ ತನಕ ಪ್ರಸಾರವಾದ ಯುವ ಕಾರ್ಯಕ್ರಮವು ಸೊಗಸಾಗಿಯೂ, ಆಕರ್ಷಕವಾಗಿಯೂ, ಮನಮುಟ್ಟುವಂತೆಯೂ ಇತ್ತು.

ವಿವೇಕಾನಂದರ ಕನಸಿನ ಭಾರತವನ್ನು ಯುವ ಜನತೆಗೆ ತಿಳಿಸುವಲ್ಲಿ ವಿನಯರವರು ಸರಳವಾಗಿಯೂ, ಅರ್ಥವತ್ತಾಗಿಯೂ ಸೈ ಎನಿಸಿಕೊಂಡರು. ವಿದೇಶಿಗರ ಪ್ರಶ್ನೆಗಳಿಗೆ ವಿವೇಕಾನಂದರು ನೀಡಿದ ಉತ್ತರಗಳು, ಅವರ ವಾಕ್‌ಚಾತುರ್ಯದ ಸಂದರ್ಭೋಚಿತವಾದ ಮಾತುಗಳು ಕೇಳುಗರ ಕಿವಿ ನಿಮಿರಿಸಿದ್ದಂತೂ ನಿಜ. ವಿವೇಕಾನಂದರ ಮೇಲೆ ಕಟ್ಟಿದ ಹಾಡು ಅರ್ಥಗರ್ಭಿತವಾಗಿದ್ದು ಹಾಡಿನ ರಾಗವೂ ಆಪ್ಯಾಯಮಾನವಾಗಿತ್ತು. ದೇಶದಲ್ಲಿ ದೊಡ್ಡ ತಲೆಬೇನೆಯಾಗಿರುವ ಭ್ರಷ್ಟಾಚಾರ ಉಗಮವಾಗಲು ವಿದ್ಯಾವಂತರೇ ಕಾರಣ ಎಂಬುದನ್ನು ಮನದಟ್ಟು ಮಾಡಿಸಿದರು. ವಿದ್ಯಾಸಂಸ್ಥೆಗಳೂ ಭ್ರಷ್ಟಾಚಾರದಲ್ಲಿ ತೊಡಗಿರುವುದು ಸತ್ಯ. ನವ ಭಾರತ ಕಟ್ಟಬೇಕಾದರೆ ಯುವ ಜನತೆ ಎಚ್ಚೆತ್ತುಕೊಳ್ಳಬೇಕೆಂಬ ಅತ್ಯುತ್ತಮ ಸಂದೇಶವನ್ನು ನೀಡಿದ್ದ ಕಾರ್ಯಕ್ರಮವಿದು.

—ಲಲಿತಾ ಅಂಬಾಗಿಲು, ಉಪ್ಪುಂದ

## ತಾಳ್ಮೆಗೂ ಮಿತಿಯಿದೆ

ಧಾರಾವಾಹಿ ನೋಡುವ ಪ್ರೇಕ್ಷಕರ ತಾಳ್ಮೆಗೂ ಒಂದು ಮಿತಿಯಿದೆ. ಕಿನ್ನರಿಯಲ್ಲಿ ನಕುಲ್ ಮೊದಲ ಪತ್ನಿ ನಿತ್ಯಾ ಇನ್ನೇನು ಸಿಕ್ಕೇ ಬಿಟ್ಟಳು ಎನ್ನುವಷ್ಟರಲ್ಲಿ ದೂರವಾಗುತ್ತಾಳೆ. ರಾಧಾ ರಮಣದಲ್ಲಿ ಸರಸ್ವತಿಯ ಮಗಳು ಅವನಿ ಮುಖವನ್ನೂ ತೋರಿಸದೇ ಪ್ರಸಾರ ಮಾಡುತ್ತಿರುವುದು. ಲಕ್ಷ್ಮಿ ಬಾರಮ್ಮದಲ್ಲಿ ಗೊಂಬೆ ಮತ್ತು ಮಗು ಮುಖಾಮುಖಿ ತೋರಿಸಿ ಕೈಗೆ ಸಿಗದಂತೆ ಮಾಡುತ್ತಾರೆ. ಅಗ್ನಿಸಾಕ್ಷಿಯಲ್ಲಿ ಚಂದ್ರಿಕಾಳ ಅಟ್ಟಹಾಸಕ್ಕೆ ಕೊನೆ ಇಲ್ಲವೇ ಇಲ್ಲ. ಸನ್ನಿಧಿ, ಅಂಜಲಿ, ಸಿದ್ಧಾರ್ಥ್, ಅಖಿಲ ಎಲ್ಲರ ಪತ್ತೆದಾರಿಕೆಯೂ ಠುಸ್.. ರಾಧಿಕಾ ಅವಳ ಮಕ್ಕಳು ಇವರ ಕೈಗೆ ಸಿಗದಂತೆ ನೋಡುತ್ತಿರುವ ಚಂದ್ರಿಕಾಳ ಕುಟಿಲತೆ...

ಅಬ್ಬಾ ನಿಂತ ನೀರಾಗಿವೆ. ಒಬ್ಬರಿಗೊಬ್ಬರನ್ನು ಮುಖಾಮುಖಿ ಭೇಟಿ ಮಾಡಿಸಿ ಮುಂದೆ ಅವರ ವರ್ತನೆ ಬಾಂಧವ್ಯಗಳು ಹೇಗಿರುತ್ತವೆಂದು ತೋರಿಸಿದರೆ ನೋಡಲು ಕುತೂಹಲ ಮೂಡಬಹುದು.

– ರತ್ನಾ ಅಶೋಕ, ಗೊರವರ

## ಗೌರವ ಇರಲಿ

‘ಕಿನ್ನರಿ’ ಧಾರಾವಾಹಿಯಲ್ಲಿ ಮಣಿಯ ಅಜ್ಜಿಯ ಪಾತ್ರ ಹಾಗೂ ಕುಲವಧುವಿನ ವಚನ ಹಾಗೂ ಧನ್ಯರ ಅಜ್ಜಿಯ ಪಾತ್ರಗಳು ಏಕೋ ಬೇಜಾರು ಬರುವಂತೆ ಅನ್ನಿಸಿವೆ. ನೋಡುಗರಿಗೆ ಆ ಪಾತ್ರಗಳ ಮೇಲೆ ಗೌರವ ಮೂಡುವಂತಾಗಲಿ. ಇನ್ನು ಮುಂದಾದರೂ ಕಿರಿಯರಿಗೆ ಮಾರ್ಗದರ್ಶನ ಕೊಡುವ ಪಾತ್ರಗಳು ಮೂಡಿಬರಲಿ.

—ಗೀತಾ ಪಾಟೀಲ್, ದಾವಣಗೆರೆ; ಮೇಘನಾ ಜಯತೀರ್ಥ, ಧಾರವಾಡ

## ಖಂಡನೀಯ

20.01.18 ಶನಿವಾರ ರಾತ್ರಿ 10.30ಕ್ಕೆ ಪ್ರಸಾರವಾದ ಸ್ಟಾರ್ ಸುವರ್ಣ ವಾಹಿನಿಯ ‘ಸಖತ್ ಕಾಮಿಡಿ’ ಕಾರ್ಯಕ್ರಮದಲ್ಲಿ ತಾಯಿ ಮಗುವಿಗೆ ಬಟ್ಟೆ ಹಾಕುವಾಗ ‘ನೀನೇನು ಗೊಮ್ಮಟೇಶ್ವರನಾ?’ ಎಂಬ ಸಂಭಾಷಣೆಯು ಜೈನ ಸಮಾಜವನ್ನು ಮುಜುಗರಕ್ಕೊಳಪಡಿಸುವಂತಿದೆ. ವಾಹಿನಿಯವರಾಗಲಿ, ಕಾರ್ಯಕ್ರಮ ನಿರ್ಮಾಪಕರಾಗಲಿ ಇಂತಹ ಸಂಭಾಷಣೆ ಬಿತ್ತರಿಸುವುದು ಖಂಡನೀಯ.

—ಮಹಾವೀರ ಕಾಸರ, ಶಿವಮೊಗ್ಗ

## ಮನೆಮಂದಿಯ ಧಾರಾವಾಹಿ

ಕಲರ್ಸ್‌ನಲ್ಲಿ ಬರುವ ‘ಶನಿ’ ಧಾರಾವಾಹಿ ಮನೆಮಂದಿ ಕುಳಿತು ನೋಡುವ ಧಾರಾವಾಹಿ. ಶನಿ ಪಾತ್ರ ಹಾಗೂ ಎಲ್ಲ ಪಾತ್ರಗಳು ಚೆನ್ನಾಗಿ ಬಂದಿವೆ.

—ತುರಗಲ್ಲ ಸುಶೀಲಾ ಶಿರಸ್ತೆದಾರ, ರಾಮದುರ್ಗ

## ಮನ ಮಿಡಿಯುವ ಶಾಂತಂ ಪಾಪಂ

ಕಲರ್ಸ್‌ನಲ್ಲಿ ನೈಜ ಘಟನೆಗಳ ಆಧಾರಿತ ‘ಶಾಂತಂ ಪಾಪಂ’ ವೀಕ್ಷಕರ ಮನ ಮಿಡಿದು, ಕಣ್ಣೀರು ತರಿಸುತ್ತಿದೆ. ಅಲ್ಲದೆ ಕ್ಷುಲ್ಲಕ ಕಾರಣಗಳಿಗೆ ಈ ರೀತಿಯ ನೀಚ ಕೃತ್ಯಗಳನ್ನೆಸಗಲು ಸಾಧ್ಯವೆ? ಸಮಾಜ ಎತ್ತ ಸಾಗುತ್ತಿದೆ ಎಂದು ಯೋಚಿಸುವಂತಾಗಿದೆ. ಸಣ್ಣ ಸಣ್ಣ ಸುಳಿವು/ ಕುರುಹುಗಳನ್ನು ಹಿಡಿದು ಹಗಲಿರುಳೆನ್ನದೆ ದುಡಿದು ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸುವ ಪೊಲೀಸ್ ತಂಡಕ್ಕೆ ದೀರ್ಘ ದಂಡ ನಮಸ್ಕಾರ ಮಾಡಿದರೂ ಸಾಲದು.

ನಮ್ಮನ್ನು ಕಾಡುವ ಪ್ರಶ್ನೆ ಎಂದರೆ ಇಂತಹ ನಿಷ್ಠಾವಂತ ಆರಕ್ಷಕರನ್ನು ಹೊಂದಿರುವ ಕರ್ನಾಟಕದ ಪೊಲೀಸ್ ಇಲಾಖೆ ದಿ.ಕಲ್ಬುರ್ಗಿಯವರ ಕೊಲೆ ಪ್ರಕರಣ ಸೇರಿದಂತೆ ಕೆಲವು ಪ್ರಕರಣಗಳನ್ನು ಇನ್ನೂ ಪತ್ತೆ ಮಾಡಿಲ್ಲವೇಕೆ?

—ಶಾಂತನಾಗರಾಜ್ ಕೆ., ಬೆಂಗಳೂರು